Inadequate Supply of Food Materials

ಶ್ರೀ ಬಾಪೂಗೌಡ ರಾಯಪ್ಪ (ಷಹಾಪುರ).—ನಾಲ್ಕು ದಿವಸಗಳ ಕೆಳಗೆ ಸರಕಾರದ ಗಮನ ಸೆಳೆಯಲು ನೋಟೀಸ್ ಕೊಟ್ಟಿದ್ದೆ. ಉಗಾದಿ ಹಬ್ಬದ ದಿನದಿಂದ ಇಲ್ಲಿಯವರೆಗೆ ಯಾವ ರೀತಿಯ ಆಹಾರಧಾನ್ಯವೂ ಸರಬರಾಯಾಗುತ್ತಿಲ್ಲ. ತಕ್ಷಣ ಓದಗಿಸಲು ಏರ್ಪಾಡು ಮಾಡಬೇಕು. ಮಂತ್ರಿಗಳಿಗೆ ವಿಚಾರ ಗೊತ್ತಿದೆ.

ಅಧ್ಯಕ್ಷರು.—ಈಗ ಆಹಾರ ಮಂತ್ರಿಗಳಿಲ್ಲ, ಅವರು ಬಂದಮೇಲೆ ಸ್ಟೇಟಮೆಂಟ್ ಮಾಡುವರು.

Leak-out of Question Papers in Examination Conduc'ed by the Mysore University

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ನಾನು ಮೈಸೂರು ಯೂನಿವರ್ಸಿಟಿಯ ಅವ್ಯವಹಾರ ಮತ್ತು ದುರುಪಯೋಗದ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೆ. ಅಲ್ಲಿ ಪ್ರಶ್ನೆಪತ್ರಿಕೆಗಳು ಬಯಲಾಗಿ ಪರೀಕ್ಷೆ ಪದೇಪದೇ ಮುಂದೂವರಿಯುತ್ತಿದೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಪರೀಕ್ಷೆಗಳಾಗಿ ಫಲಿತಾಂಶ ಬರುತ್ತಿದೆ. ಸರಕಾರದಿಂದ ಉತ್ತರ ಬರುವುದು ತಡವಾದರೆ ನನ್ನ ಉದ್ದೇಶ ಸಾರ್ಥಕವಾಗುವುದಿಲ್ಲ.

ಅಧ್ಯಕ್ಷರು.—ರೂಲ್ 312ರ ಪ್ರಕಾರ ತಾವು ಕೊಟ್ಟಿರುವುದು, ಅದರ ಬಗ್ಗೆ ರೂಲಿಂಗ್ ಕೊಟ್ಟಿರುವುದನ್ನು ನೋಡಿ. ಅಜೆಂಡಾದಲ್ಲಿ ತಮ್ಮ ವಿಚಾರ ಸೇರಿಸಿದಾಗ ವಿಷಯ ಹೇಳಬಹುದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾಗಮಂಗಲದ ಗರಾಚೆ ಬಗ್ಗೆ ಮೆಜೆಸ್ಟ್ರೀರಿಯಲ್ ಎನ್‌ಕ್ವೈರಿ ಆಗಿದೆಯೆಂದು ತಿಳಿದುಬಂದಿವೆ. ಅದಕ್ಕೆ ಸಂಬಂಧಪಟ್ಟ ವರದಿಯನ್ನು ಸಭೆಯ ಮುಂದಿಡಬೇಕು ಎಂದು ನಾನು ಬರೆದಿದ್ದೇನೆ.

BUDGET ESTIMATES FOR 1973-74

Demands for Grants

Demand No. 14, 16, 24, 43, 44 and 24-A

(Debate Continued)

† ಶ್ರೀ ಎಸ್. ಎಂ. ಕೃಷ್ಣಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಣಿಯವರೇ, ಕೈಗಾರಿಕೆ ಮತ್ತಿತರ ಇಲಾಖೆಗಳ ಬೇಡಿಕೆಗಳನ್ನು ನಾನು ಮಾನ್ಯ ಸದನದ ಮುಂದಿಟ್ಟು ಅವುಗಳಿಗೆ ಮಂಜೂರಾತಿಯನ್ನು ಕೊಡಬೇಕು ಎಂಬುದಾಗಿ ಪ್ರಾರ್ಥನೆ ಮಾಡಿದಾಗ ಇಲಾಖೆಯ ಕಾರ್ಯ ಅಡಳಿತದ ಬಗ್ಗೆ ಸದನದ ಮಾನ್ಯ ಸದಸ್ಯರು ನಾನಾ ದೃಷ್ಟಿಕೋನಗಳಿಂದ ವಿಮರ್ಶೆ ಮಾಡಿ ಕೆಲವು ಉತ್ತಮವಾದಂಥ ಸಲಹೆಗಳನ್ನು ಸಭೆಯ ಮುಂದೆ ಮಂಡಿಸಿದ್ದಾರೆ.

ಅದರ ಜೊತೆಗೆ ಸರ್ಕಾರದ ಕೈಗಾರಿಕಾ ಧೋರಣೆಯ ಬಗ್ಗೆ ನಾವು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ, ಧೋರಣೆಯಲ್ಲಿ ದೋಷ ಇದೆ, ಮತ್ತು ಧೋರಣೆಯನ್ನು ಕಾರ್ಯರೂಪಕ್ಕೆ ತರತಕ್ಕಂಥ ಕಾಲವಲ್ಲಿ ಸಾಕಾದಷ್ಟು ಸತ್ವಶಾಲಿಯಾದಂಥ ಆಡಳಿತ, ನಾಯಕತ್ವ ಸಿಕ್ಕಲಿಲ್ಲ ಎನ್ನತಕ್ಕಂಥ ಟೀಕೆಗಳನ್ನು ಮಾಡಿದ್ದಾರೆ. ಬಂದ ರಚನಾತ್ಮಕ ಸಲಹೆಗಳನ್ನು ಎಷ್ಟು ಸಂತೋಷದಿಂದ ಸ್ವಾಗತಿಸುತ್ತಾ ಇದ್ದೇನೆಯೋ ಅಷ್ಟೇ ಸಂತೋಷದಿಂದ ಇಲ್ಲಿ ಬಂದಿರತಕ್ಕ ಟೀಕೆಗಳ ಹಿನ್ನೆಲೆಯಲ್ಲಿ ನಮ್ಮ ಇಲಾಖೆಯ ಕಾರ್ಯ ನಡವಳಿಕೆಗಳ ಬಗ್ಗೆ ನಾವು ಮತ್ತೆ ಮತ್ತೆ ಪುನರ್ ಪುನರ್ ಪರಿಶೀಲನೆ ಮಾಡುವುದಕ್ಕೆ ಒಂದು ಅವಕಾಶ ಉಂಟುಮಾಡಿವೆ ಎಂದು ಟೀಕೆ ಮಾಡಿದಂಥ ಸದಸ್ಯರಿಗೂ ಕೂಡ ನನ್ನ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತೇನೆ. ಮೈಸೂರು ರಾಜ್ಯದ ಕೈಗಾರಿಕಾ ರೀತಿ ನೀತಿಗಳ ಮೇಲೆ ಚರ್ಚೆಯನ್ನು ಆರಂಭಿಸಿದಂಥ ಗೆಳೆಯರಾದ ಮಾನ್ಯ ಕೃಷ್ಣನ್ ಅವರು ನಮ್ಮ